


# ಕರ್ಣನ ರಂಗಪ್ರವೇಶ

ಬೆರಗಿನಿಂದ ಅರಳಿದ ಆ ಕಣ್ಣನ್ನು ನೋಡಿಯೇ ಜನ ಜಾಗ ಬಿಟ್ಟರು.

ವಿಶಾಲವಾದ ರಂಗಸ್ಥಳಕ್ಕೆ ಬಂದ—ಕರ್ಣ

ಸಹಜ ಕವಚದಿಂದ ಹೊಳೆಯುತ್ತಿದ್ದ. ಕುಂಡಲದಿಂದ ಮೊಗ ಬೆಳಗುತಿತ್ತು. ಕೈಯಲ್ಲಿ ಬಿಲ್ಲು. ಸೊಂಟದಲ್ಲಿ ಖಡ್ಗ. ಪರ್ವತವೇ ನಡೆದು ಬರುತ್ತಿರುವ ಹಾಗೆ.

ಭಾರೀ ತೇಜ ಅವನಿಗೆ. ರಂಗಮಂಡಲದ ಸುತ್ತ ಏನನ್ನೋ ನಿರೀಕ್ಷಿಸುತ್ತಾ ಕಣ್ಣಾಡಿಸಿದ. ದ್ರೋಣ ಕೃಪರಿಗೆ ಮುಗಿದೂ ಮುಗಿಯದ ಹಾಗೆ ಕೈಮುಗಿದ.

ನೆರೆದ ಜನ ಮಿಸುಕಲಿಲ್ಲ, ಎವೆ ಇಕ್ಕಲಿಲ್ಲ. ಯಾರಿವನು ಎಂದು ಬೆರಗಾಗಿ ನೋಡುತಿದ್ದರು. ಮೇಘದ ಹಾಗೆ ಗಂಭೀರದ ದನಿಯಲ್ಲಿ ಹೇಳಿದ:

‘ಲೋ ಪಾರ್ಥ, ನೀನು ತೋರಿಸಿದ್ದನ್ನು ಮೀರಿಸುವಂಥದ್ದನ್ನು ಮಾಡಿ ತೋರಿಸುತ್ತೇನೆ. ಸುಮ್ಮನೆ ನಿನಗೆ ನೀನೇ ಬೆರಗು ಬೀಳಬೇಡ’.

ಇನ್ನೂ ಅವನ ಮಾತು ಮುಗಿದೇ ಇಲ್ಲ, ಯಂತ್ರದಿಂದ ಚಿಮ್ಮಿಸಿದವರ ಹಾಗೆ ಕೂತಿದ್ದ ಜನವೆಲ್ಲ ದಡಕ್ಕನೆ ಎದ್ದು ನಿಂತಿತು.

ದುರ್ಯೋಧನನಿಗೆ ಅವನ ಈ ಮಾತು ಕೇಳಿ ಖುಷಿಯಾಯಿತು. ಅರ್ಜುನನಿಗೋ ಅವನ ಮಾತು ಕೇಳಿದ್ದೇ ತಡ, ನಾಚಿಕೆ ಕೋಪ ಎರಡೂ ಏರಿತು.

ಸದಾ ರಣರಂಗದ ಗೀಳಿನ ಕರ್ಣ, ದ್ರೋಣನ ಅಪ್ಪಣೆ ಪಡೆದು ಅರ್ಜುನ ಮಾಡಿದ್ದೆಲ್ಲವನ್ನೂ ಮಾಡಿ ತೋರಿಸಿದ. ಕೂಡಲೇ ದುರ್ಯೋಧನ ತಮ್ಮಂದಿರ ಜೊತೆ ಬಂದು ಕರ್ಣನನ್ನು ಅಪ್ಪಿಕೊಂಡು ಹಿಗ್ಗಿನಿಂದ ಅಂದ—

‘ನೀನು ಬಂದದ್ದು ಒಳ್ಳೆಯದಾಯಿತು. ನಮ್ಮ ಮಾನ ಉಳೀತು. ಈ ಕುರುರಾಜ್ಯವನ್ನು, ನನ್ನನ್ನು ನಿನ್ನಿಷ್ಟ ಬಂದ ಹಾಗೆ ಬಳಸಿಕೋ’.

**ಕರ್ಣ:** ‘ನಾನು ಮಾಡಿದ್ದೆಲ್ಲ ನಿನಗಾಗಿ ಅಂದುಕೋ. ನಿನ್ನ ಗೆಳೆತನ ಒಂದಿದ್ದರೆ ಸಾಕು ನನಗೆ. ನಾನು ಅರ್ಜುನನ ಜೊತೆ ದ್ವಂದ್ವಯುದ್ಧ ಮಾಡಬೇಕು’.

ಆ ಸೋದರರ ನಡುವೆ ಅಲ್ಲಾಡದೆ ಬೆಟ್ಟದ ಹಾಗೆ ನಿಂತಿದ್ದ ಕರ್ಣನನ್ನು ನೋಡುತ್ತಾ ದುರ್ಯೋಧನ ‘ನನ್ನ ಜತೆ ಎಲ್ಲ ಭೋಗವನ್ನೂ ಭೋಗಿಸು. ನನ್ನ ನಂಟರ ಬಯಕೆ ತೀರಿಸು’ ಎಂದ.

**ಅರ್ಜುನ:** ‘ಕರೆಯದೆ ಬಂದವರನ್ನ, ಕೇಳದೆ ಮಾತಾಡುವವರನ್ನ, ಯಾವ ಲೋಕಕ್ಕೆ ಕಳುಹಿಸಬೇಕೋ ಆ ಲೋಕವನ್ನು ನಿನಗೆ ತೋರಿಸುತ್ತೇನೆ ಬಾ’.

**ಕರ್ಣ:** ಇದು ರಂಗ. ಎಲ್ಲರಿಗೂ ಸಮ. ಇಲ್ಲಿ ನಿನ್ನದೇನು ಅಂತ? ಕ್ಷತ್ರಿಯರಿಗೆ ಬಲವೇ ಧರ್ಮ. ಅವರಿಗೆ ಬಲದಿಂದಲೇ ದೊಡ್ಡತನ. ದುರ್ಬಲರ ಹಾಗೆ ಮಾತಾಡಿ ಯಾಕೆ ದಣೀತೀಯ, ಬಾ ಬಾಣದಲ್ಲಿ ಮಾತಾಡು. ನಿನ್ನ ಗುರುವಿನ ಮುಂದೆಯೇ ಈ ಕ್ಷಣ ನನ್ನ ಬಾಣದಿಂದ ನಿನ್ನ ತಲೆ ತೆಗೆಯುತ್ತೇನೆ.

ಆಗ ದ್ರೋಣನ ಅಪ್ಪಣೆ ಪಡೆದು ಕುಂತಿಯ ಮಗ ಸಜ್ಜಾದ. ಅವನ ಸೋದರರು ಅವನನ್ನು ಅಪ್ಪಿಕೊಂಡರು. ದುರ್ಯೋಧನ ಕೂಡ ತನ್ನ ತಮ್ಮಂದಿರೊಡನೆ ಕರ್ಣನನ್ನು ಅಪ್ಪಿಕೊಂಡು ಹುರಿದುಂಬಿಸಿದ. ಕರ್ಣನೂ ಬಿಲ್ಲು ಬಾಣ ಹಿಡಿದು ಹೊರಟ.

ಆಗ ಮೋಡ ಮಿಂಚು ಗುಡುಗು ಶುರುವಾಯಿತು. ಮಗನ ಮೇಲಿನ ಅಕ್ಕರೆಯಿಂದ ಇಂದ್ರ ಬಾನಿಗೆ ಬಂದಿದ್ದ. ಮೋಡದ ನೆರಳಲ್ಲಿ ಅರ್ಜುನ ಕಾಣದಂತೆ ಮಾಡಿದ್ದ. ಇದನ್ನ ತಿಳಿದ ಸೂರ್ಯ ಮೋಡಗಳನ್ನು ಕತ್ತರಿಸಿ ಹಾಕಿ ತನ್ನ ಮಗನಿಗೆ ಎಲ್ಲವೂ ಕಾಣುವಂತೆ ಬಿಸಿಲು ಬಿಟ್ಟ.

ಕರ್ಣ ನಿಂತಿದ್ದ ಕಡೆಯಲ್ಲಿ ಧೃತರಾಷ್ಟ್ರನ ಮಕ್ಕಳು ನಿಂತಿದ್ದರು. ಅರ್ಜುನ ನಿಂತಿದ್ದ ಕಡೆ ದ್ರೋಣ, ಕೃಪ, ಭೀಷ್ಮರು ನಿಂತಿದ್ದರು. ರಂಗಸ್ಥಲವೇ ಎರಡು ಬಣವಾಗಿ ತೋರಿತು. ಹೆಂಗಸರಲ್ಲೂ ಎರಡು ಗುಂಪಾಗಿ ಎರಡು ಕಡೆ ನಿಂತಿದ್ದರು. ಕುಂತೀ ಭೋಜನ ಮಗಳಿಗೆ ಯುದ್ಧದ ಮಾತು ತಿಳಿದು ಸ್ವಯ ತಪ್ಪಿತು. ಆಗ ವಿದುರ ದಾಸಿಯರನ್ನ ಕಳಿಸಿ ಚಂದನ ಸವರಿ ಅವಳಿಗೆ ಪ್ರಜ್ಞೆ ಬರುವಂತೆ ಮಾಡಿದ. ಕುಂತಿಗೆ ಏನೂ ತೋಚಲೇ ಇಲ್ಲ. ಎದುರು ಬದುರಾಗಿ ಯುದ್ಧಕ್ಕೆ ಸಜ್ಜಾಗಿ ನಿಂತ ತನ್ನ ಇಬ್ಬರು ಮಕ್ಕಳನ್ನು ನೋಡಿ ಮುದುಡಿ ತಬ್ಬಿಬ್ಬಾದಳು.

ಬಿಲ್ಲು ಹಿಡಿದು ಯುದ್ಧಕ್ಕೆ ನಿಂತವರನ್ನ ನೋಡಿದ ಕೃಪಾಚಾರ್ಯ ಕರ್ಣನಿಗೆ ಹೀಗೆಂದ:

‘ನೋಡು ಮಹಾಬಾಹೂ, ಇವನು ಕುಂತಿಯ ಕೊನೆಯ ಮಗ, ಪಾಂಡುಪುತ್ರ, ಕುರುವಂಶದಲ್ಲಿ ಹುಟ್ಟಿದಾನೆ. ನಿನ್ನ ಜತೆ ದ್ವಂದ್ವಯುದ್ಧ ಮಾಡತಾನೆ. ನೀನೂ ನಿನ್ನ ತಂದೆ ತಾಯಿ ಕುಲ ತಿಳಿಸು ಮಹಾಬಾಹೂ. ಅದು ತಿಳಿದ ಆಮೇಲೆ ಇವನು ಇಷ್ಟಪಟ್ಟರೆ ಯುದ್ಧ ಮಾಡಬಹುದು, ಬಿಟ್ಟರೆ ಬಿಡಬಹುದು. ಕುಲ ಸಮಾಚಾರ ಗೊತ್ತಿಲ್ಲದೆ ರಾಜಪುತ್ರರು ಯುದ್ಧ ಮಾಡುವುದಿಲ್ಲ.’